ಡಾ: ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಬಸವಕಲ್ಯಾಣದಲ್ಲಿ ಶರಣ ಸಂಶೋಧನಾ ಅಕಾಡೆಮಿಯ ಸ್ಥಾಪನೆಯನ್ನು ನಿರ್ಬಂಧಿಸುವ ಅನುಶಾಸನ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಬಸವಕಲ್ಯಾಣ ತಾಲ್ಲೂಕಿನ ತ್ರಿಪುರಾಂತ ಗ್ರಾಮದ 153ನೇ ಸರ್ವೆ ನಂಬರಿನಲ್ಲಿ 9 ಎಕರೆ 36 ಗುಂಟೆ ಜಮೀನನ್ನು ಬೀದರ್ ಜಿಲ್ಲಾ ಅಧಿಕಾರಿಗಳು ಮಂಜೂರು ಮಾಡಿದ್ದಾರೆ. ಯಾವುದೇ ವೆಚ್ಚವಾಗಿಲ್ಲ.

ಇ) 10 ಸಾವಿರ ರೂ.ಗಳನ್ನು ಮಾತ್ರ ಶಿಲನ್ಯಾಸ ಕಾರ್ಯಕ್ರಮಕ್ಕಾಗಿ ವೆಚ್ಚ ಮಾಡಲಾಗಿದೆ.

ಈ) ಮಂಜೂರಾತಿ ನೀಡುವ ವಿಚಾರವನ್ನು ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಪರೀಶಿಲಿಸಲಾಗುತ್ತಿದೆ.

ಉ) ಹೌದು.

ಬಸವಕಲ್ಯಾಣದ ಆಯುರ್ವೇದ ಆಸ್ಪತ್ರೆಯ ಮೂಲಭೂತ ಸೌಕರ್ಯಗಳಿಲ್ಲದೆ ಇರುವುದು

1973 (2642) ಶ್ರೀ ಎಂ.ಜಿ.ಮೂಳೆ (ಬಸವಕಲ್ಯಾಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬಸವಕಲ್ಯಾಣಕ್ಕೆ ಆಯುರ್ವೇದ ಆಸ್ಪತ್ರೆಯು ಎಂದು ಮಂಜೂರಾಯಿತು;

ಆ) ಈ ಆಸ್ಪತ್ರೆ ಈಗ ಕಾರ್ಯನಿರ್ವಹಿಸುತ್ತಿದೆಯೆ; ಹಾಗಿದ್ದಲ್ಲಿ ಈ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರು ಹಾಗೂ ಇತರೆ ಸಿಬ್ಬಂದಿ ವರ್ಗದ ವಿವರಗಳೇನು;

ಇ) ಈ ಆಸ್ಪತ್ರೆಯು ಯಾವ ಜಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ;

ಈ) ಈ ಆಸ್ಪತ್ರೆಗೆ ಸ್ವಂತ ಕಟ್ಟಡ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೆ; ಒದಗಿಸಿದ್ದಲ್ಲಿ ಪೂರ್ಣ ವಿವರಗಳನ್ನು ನೀಡುವುದು;

ಉ) ಈ ಆಸ್ಪತ್ರೆಗೆ ಕಳೆದ ಒಂದು ವರ್ಷದಲ್ಲಿ ಅಗತ್ಯವಿರುವ ಔಷಧಿಗಳನ್ನು ಸರಬರಾಜು ಮಾಡಲಾಗಿದೆಯೆ; ಇದಕ್ಕೆ ತಗುಲಿದ ವೆಚ್ಚವೆಷ್ಟು;

ಊ) ಈ ಆಸ್ಪತ್ರೆಗೆ ಸ್ವಂತ ಕಟ್ಟಡ ಕೊರತೆ ಔಷಧಿಗಳ ಕೊರತೆ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ನಿಜವೆ;

ಋ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು; ಹಾಗೂ ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಸವಕಲ್ಯಾಣ ಪಟ್ಟಣಕ್ಕೆ ದಿನಾಂಕ:31.3.1998 ರಂದು ಆಯುರ್ವೇದ ಆಸ್ಪತ್ರೆಯು ಮಂಜೂರಾಗಿರುತ್ತದೆ.

ಆ) ಹೌದು. ಡಾ: ಜೆ.ಬಿ.ಚನಾಳ್, ವೈದ್ಯರು ಮಾತ್ರವೇ ಕೆಲಸ ಮಾಡುತ್ತಿದ್ದಾರೆ.

ಇ) ಸಾರ್ವಜನಿಕ ಆಸ್ಪತ್ರೆಯ ಹಳೆಯ ಕಟ್ಟಡದಲ್ಲಿ ಈ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದೆ.

ಈ) ಈ ಆಸ್ಪತೆಗೆ ಸ್ವಂತ ಕಟ್ಟಡ ಇರುವುದಿಲ್ಲ.

ಉ) ಹೌದು. ಈ ಆಸ್ಪತ್ರೆಗೆ ಅಗತ್ಯವಿರುವ ಔಷಧಗಳನ್ನು ಮಂಜೂರು ಮಾಡಲಾಗಿದೆ. ರೂ. 18,000.00 ಗಳ ವೆಚ್ಚವನ್ನು ಈ ಉದ್ದೇಶಕ್ಕೆ ಮಾಡಲಾಗಿದೆ.

ಊ) ಹೌದು.

ಋ) ಸದ್ಯಕ್ಕೆ ಹಾಲಿ ಕಟ್ಟಡದಲ್ಲೇ ಈ ಆಸ್ಪತ್ರೆಯನ್ನು ಮುಂದುವರೆಸಲಾಗುವುದು. ಸಿಬ್ಬಂದಿಗಳ ನೇಮಕಕ್ಕೆ ಕ್ರಮ ಕೈಗೊಳ್ಳಲಾಗುವುದು. ಔಷಧಿಗಳ ಕೊರತೆ ನೀಗಲು ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಆಯುರ್ವೇದಿಕೆ ಮತ್ತು ಹೋಮಿಯೋಪತಿ ಆಸ್ಪತ್ರೆಗಳು

1976 (2577) ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಯುರ್ವೇದಿಕೆ ಮತ್ತು ಹೋಮಿಯೋಪತಿ ಆಸ್ಪತ್ರೆಗಳ ಸಂಖ್ಯೆ ಎಷ್ಟು;

ಆ) ಈ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿಗಳು ಇದ್ದಾರೆಯೆ;

ಇ) ಖಾಲಿಯಿರುವ ಹುದ್ದೆಗಳಿಗೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡಲು ಮತ್ತು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಇಲಾಖೆಯ ನಿಯಮವೇನು;

ಈ) ನೇಮಕಾತಿ ಸಮಿತಿಯು ರಾಜ್ಯ ಮಟ್ಟದಲ್ಲಿಯೆ, ಸಮಿತಿಯಲ್ಲಿ ಇರುವ ಸದಸ್ಯರುಗಳ ವಿವರ ನೀಡುವುದು?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೂರು ಸರ್ಕಾರಿ ಆಯುರ್ವೇದ ಆಸ್ಪತ್ರೆಗಳು ಮತ್ತು 38 ಚಿಕಿತ್ಸಾಲಯಗಳು ಇವೆ. ಈ ಜಿಲ್ಲೆಯಲ್ಲಿ ಸರ್ಕಾರಿ ಹೋಮಿಯೋಪತಿ ಆಸ್ಪತ್ರೆ : ಚಿಕಿತ್ಸಾಲಯಗಳು ಇರುವುದಿಲ್ಲ.

ಆ) ಈ ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಲ್ಲಿ 22 ವೈದ್ಯರುಗಳು ಕಾರ್ಯನಿರ್ವಹಿಸುತ್ತಿದ್ದು, 22 ವೈದ್ಯರ ಹುದ್ದೆಗಳು ಖಾಲಿ ಇರುತ್ತವೆ.

ಇ) ಈ ಹುದ್ದೆಗಳಿಗೆ ಇಲಾಖೆಯ ನೇಮಕಾತಿ ನಿಯಮಗಳನ್ವಯ ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆಗೊಳಿಸಿದ ಅಭ್ಯರ್ಥಿಗಳನ್ನು ವೈದ್ಯಾಧಿಕಾರಿಗಳನ್ನಾಗಿ ಸರ್ಕಾರವು ನೇಮಕ ಮಾಡುವುದು.